# ಮೆಕಡೆಮಿಯಾ ತೋಪಿನಿಂದ ಅಡಿಕೆಗೊಂದು ಪಾಠ

ಚಿತ್ರ– ಲೇಖನ:
**ಉಮೇಶ್ ಕಾಕಾಲ್**



ದಕ್ಷಿಣ ಆಫ್ರಿಕಾದಲ್ಲೊಂದು ಮೆಕಡೆಮಿಯಾ ತೋಪು



ಟ್ರೇ ಗಳಲ್ಲಿ ತುಂಬಿಟ್ಟ ಹಸಿ ಕಾಯಿಗಳು



ಗ್ಯಾಂಗ್ ಮೆಶಿನ್



ಗುಣಮಟ್ಟವನ್ನು ಕಾಯುವ ಕಾಯಕ



ಕನ್ವೆಯರ್ ನಲ್ಲಿ ರಪ ರಪನೆ ಬೀಳುತ್ತಿರುವ ಮೆಕಡೆಮಿಯಾ ಬೀಜಗಳು

ಮಲೆನಾಡಿನಲ್ಲಿ ಮತ್ತೆ ಅಡಿಕೆ ಕೊನೆ ಕೊಯಿಲಿನ ಸಮಯ. ಕೊನೆ ಕೊಯ್ಯಿಸಲು ತಿಣುಕಾಟ. ಕೊಯ್ದ ಅಡಿಕೆಯನ್ನು ಸುಲಿಸಲು ಪಡಬಾರದ ಪಾಡು. ಕೈ ಸುಲಿಕೆಯಿಂದ ಪೂರೈಸಲಾಗದ ಸನ್ನಿವೇಶದಲ್ಲಿ ಯಂತ್ರಗಳಿಗಾಗಿ ಹುಡುಕಾಟ. ಕಳೆದ ಹಲವು ವರ್ಷಗಳಲ್ಲಿ ಸಾವಿರಾರು ಅಡಿಕೆ ಸುಲಿಯುವ ಯಂತ್ರಗಳು ಮಾರುಕಟ್ಟೆಗೆ ಬಂದಿವೆ. ಆದರೆ ಎಲ್ಲವೂ ಒಂದೇ ಮಾದರಿಯವು.

ಕಂಪೆನಿಯ ಕೆಲಸದ ನಿಮಿತ್ತ ಕಳೆದ ವರ್ಷ ದಕ್ಷಿಣ ಆಫ್ರಿಕಾಕ್ಕೆ ಭೇಟಿ ನೀಡಿದ್ದೆ. ಅವತ್ತು ವಾರಾಂತ್ಯದ ರಜೆಯಲ್ಲಿ ದಕ್ಷಿಣ ಆಫ್ರಿಕಾದ ರಾಜಧಾನಿ ಜೊಹನ್ನೆಸ್ ಬರ್ಗ್ ನಿಂದ ವಿಮಾನದಲ್ಲಿ ನೆಲ್ಸ್ಪುರ್ಟ್ ಎಂಬ ಸಣ್ಣದೊಂದು ನಿಲ್ದಾಣಕ್ಕೆ ತೆರಳಿ ಕ್ರೂಗರ್ ನ್ಯಾಷನಲ್ ಪಾರ್ಕಿನಲ್ಲಿ ತಂಗಿ ಸಫಾರಿ ನೋಡುವ ಕಾರ್ಯಕ್ರಮ ನಮ್ಮದಿತ್ತು. ನಿಲ್ದಾಣಕ್ಕೆ ಬಂದಿಳಿದ ನಂತರ ನನ್ನ ಸಹೋದ್ಯೋಗಿ, ತಮಿಳು ಮೂಲದ ಫಣೀಂದ್ರ ಕಾರೊಂದನ್ನು ಬಾಡಿಗೆಗೆ ಪಡೆದ. ಸುಮಾರು ಮೂರು ಘಂಟೆಗಳ ಕಾಲ ಕಾರಿನಲ್ಲಿ ಪ್ರಯಾಣ ಮಾಡಿ ಕ್ರೂಗರ್ ನ್ಯಾಷನಲ್ ಪಾರ್ಕಿನ ಲಾಡ್ಜ್ ಒಂದರಲ್ಲಿ ನಾವು ತಂಗಬೇಕಾಗಿತ್ತು.

ನಿಲ್ದಾಣದಿಂದ ಹೊರ ಹೊರಡುತ್ತಿದ್ದಂತೆಯೇ 'ಮೆಕಡೆಮಿಯಾ ತೋಪಿಗೆ ಸ್ವಾಗತ' ಎಂಬ ಬರಹವೊಂದು ನನ್ನನ್ನು ಆಕರ್ಷಿಸಿತು. ಬಿಳಿ ಬಣ್ಣದ ರುಚಿ ರುಚಿಯಾದ ಮೆಕಡೆಮಿಯಾ ಬೀಜಗಳನ್ನು ವಿಮಾನದಲ್ಲಿ ತಿಂದು ಸ್ವಾದವನ್ನು ಮೆಲಕು ಹಾಕಿದ ಅನುಭವವಿತ್ತೇ ಹೊರತು, ಅದರ ಗಿಡಗಳನ್ನಾಗಲೀ, ಕಾಯಿಗಳನ್ನಾಗಲೀ ನೋಡಿದ ನೆನಪಿರಲಿಲ್ಲ. ದಾರಿಯ ಬದಿಗೆ ಕಿತ್ತಳೆ ಹಣ್ಣುಗಳ ತೋಟ ಮತ್ತು ಮೆಕಡೆಮಿಯಾ ಗಿಡಗಳ ತೋಪುಗಳನ್ನು ನೋಡುತ್ತಾ ಸಾಗುತ್ತಿದ್ದೆವು.

## ಮೆಕಡೆಮಿಯಾ ಫ್ಯಾಕ್ಟರಿ

ಸುಮಾರು ಆರು ಕಿ.ಮೀ. ದೂರ ಕ್ರಮಿಸಿದ ನಂತರ 'ಮೆಕಡೆಮಿಯಾ ನಟ್ ಪ್ರೊಸೆಸಿಂಗ್ ಫ್ಯಾಕ್ಟರಿ' ಎಂಬ ಫಲಕವೊಂದು ಕಾಣಿಸಿತು. ಯಾವುದೇ ಗೇಟ್ ಇಲ್ಲದ, ಲಾರಿಗಳು ಕ್ರಮಿಸಿದ ಸೂಚನೆಯಿದ್ದ ದಾರಿಯೊಂದು ಕಂಡು ಧೈರ್ಯ ಮಾಡಿ ಕಾರನ್ನು ತೋಪಿನ ಒಳಗೆ ಓಡಿಸಿದೆವು. ಒಂದು ಫರ್ಲಾಂಗ್ ಕ್ರಮಿಸಿದ ನಂತರ ಒಂದೆರಡು ಶೆಡ್ಡುಗಳೂ ಮತ್ತು ಅಡಿಕೆ ಸಿಪ್ಪೆಯಂತಹ ಅರೆ ಬರೆ ಕೊಳೆತ ಸಿಪ್ಪೆಗಳ ರಾಶಿಯೊಂದು ಕಾಣಸಿಕ್ಕು ನನ್ನ ಕುತೂಹಲ ಇನ್ನಷ್ಟು ಹೆಚ್ಚಿತು. ಅಲ್ಲಿಂದ ಕೆಳಮುಖದ ಮಾರ್ಗದಲ್ಲಿ ಮತ್ತೊಂದು ಶೆಡ್ ಗೋಚರಿಸಿ, ಅಲ್ಲಿಗೂ ಹೊರಟೆವು. ಮಾರ್ಗ ಮಧ್ಯದ ತೋಪಿನ ಗಿಡಗಳಲ್ಲಿ ಗೊಂಚಲು ಗೊಂಚಲಾಗಿ ಅಡಿಕೆ ಕಾಯಿ ಗಾತ್ರದ ಮೆಕಡೆಮಿಯಾ ಕಾಯಿಗಳನ್ನು ಮೊಟ್ಟ ಮೊದಲ ಬಾರಿಗೆ ನೋಡಿದ ಅನುಭವ ನಮ್ಮದಾಯಿತು.

ಫ್ಯಾಕ್ಟರಿ ಶೆಡ್ ಹೊರಗಡೆ ಭಾರೀ ಗಾತ್ರದ ಲಾರಿಯೊಂದಕ್ಕೆ ಅಷ್ಟೇ ದೊಡ್ಡ ಯಂತ್ರವೊಂದರಿಂದ ಬೀಜ ತುಂಬಿದ ಚೀಲಗಳನ್ನು ಲೋಡ್ ಮಾಡುತ್ತಿದ್ದರು. ಕೆಂಪು ಬಣ್ಣದ ಯೂನಿಫಾರ್ಮ್ ಮತ್ತು ಹಳದಿ ಬಣ್ಣದ ಹೆಲ್ಮೆಟ್ ಧರಿಸಿದ ಕರಿಯ ಸೂಪರ್‌ವೈಸರ್ ಒಬ್ಬ ಇನ್ನೆರಡು ಮಂದಿಗೆ ಸೂಚನೆ ಕೊಡುತ್ತಿದ್ದ.

ಆತನ ಗಮನ ಸೆಳೆದು ನಾವು ಟೂರಿಸ್ಟ್ ಗಳು ಎಂದು ಪರಿಚಯಿಸಿಕೊಂಡು ಫ್ಯಾಕ್ಟರಿ ನೋಡುವ ಬಯಕೆಯನ್ನಿಟ್ಟೆವು. ಆತ ಅಲ್ಲೇ ಸನಿಹದಲ್ಲಿ ನಿಕ್ಕರ್ ಮತ್ತು ಟಿ ಶರ್ಟ್ ಧರಿಸಿ ಲಾರಿಗೆ ಲೋಡ್ ಆಗುವುದನ್ನು ತೃಪ್ತಿಯಿಂದ ನೋಡುತ್ತಿದ್ದ ಬಿಳಿಯನೊಬ್ಬನ ಕಡೆ ತೋರಿಸಿ 'ಫ್ಯಾಕ್ಟರಿ ಮಾಲಿಕರಿಂದ ಅನುಮತಿ ಪಡೆಯಿರಿ' ಎಂದ. ಬ್ರಿಟಿಷರ ಆಡಳಿತದಲ್ಲಿದ್ದ ದಕ್ಷಿಣ ಆಫ್ರಿಕಾದಲ್ಲಿ ಈಗಲೂ ಬಿಳಿಯರ ಒಡೆತನದಲ್ಲಿರುವ ಎಸ್ಟೇಟ್ ಗಳು ಚಾಲ್ತಿಯಲ್ಲಿವೆ. ಆ ಬಿಳಿ ಯುವಕನಿಂದ ಅನುಮತಿ ಪಡೆದು ಸೂಪರ್‌ವೈಸರ್ ಪೀಟರ್ ಜೊತೆ ಫ್ಯಾಕ್ಟರಿ ಒಳ ಹೊಕ್ಕೆವು.

ಫ್ಯಾಕ್ಟರಿ ಶೆಡ್ ನ ಹೊರಬಾಗದಲ್ಲಿ ಮೆಕಡೆಮಿಯಾ ಹಸಿ ಕಾಯಿಗಳನ್ನು ಗುಂಡಿಯೊಂದಕ್ಕೆ ಸುರಿಯುತ್ತಿದ್ದರು. ಪ್ಲಾಸ್ಟಿಕ್ ಕ್ರೇಟ್ ಗಳಲ್ಲಿ ತುಂಬಿಟ್ಟಿದ್ದ ಹಸಿ ಕಾಯಿಗಳನ್ನು ನೋಡಿದಾಗ ದೂರದಿಂದ ಅವು ಹಸಿರು ಬಣ್ಣದ ಅಡಿಕೆ ಕಾಯಿಗಳಂತೆಯೇ ಕಂಡುಬಂದವು. ಗುಂಡಿಗೆ ಬಿದ್ದ ಕಾಯಿಗಳು ಬೆಲ್ಟ್ ಒಂದರ ಮೂಲಕ ಗೋಡೆಯ ರಂಧ್ರದಲ್ಲಿ ತೂರಿ ಒಳಗಿನ ಸುಲಿಯಂತ್ರಕ್ಕೆ ಬೀಳುತ್ತಿದ್ದವು.

ಮೆಟ್ಟಿಲುಗಳನ್ನು ಹತ್ತಿ ಸುಲಿಯಂತ್ರದ ಬಳಿಗೆ ಬಂದು ನಿಂತಾಗ ಒಮ್ಮೆಗೇ ಸುಮಾರು 24 ಕಾಯಿಗಳ ಬೀಜಗಳನ್ನು ಸಿಪ್ಪೆಯಿಂದ ಹೊರಬಿಡಿಸುವ ಗ್ಯಾಂಗ್ ಯಂತ್ರವೊಂದು ಗೋಚರಿಸಿತು.

ಅಡಿಕೆಯ ಬಗ್ಗೆ ಮಾಹಿತಿಯೂ ಇಲ್ಲದ, ಮೆಕಡೆಮಿಯಾ ಕಾಯಿಗಳನ್ನೂ ಮೊದಲ ಬಾರಿಗೆ ನೋಡಿದ ನನ್ನ ಇಬ್ಬರು ಸಹೋದ್ಯೋಗಿಗಳು ನನ್ನ ಕುತೂಹಲ ಮತ್ತು ಮಾಹಿತಿಗಳಿಂದಾಗಿ ಒಂದಷ್ಟು ಪ್ರೇರಿತರಾಗಿ ನನ್ನೊಡನೆ ಹೆಜ್ಜೆ ಹಾಕಿದರು.

ಮೆಕಡೆಮಿಯಾ ಹಸಿ ಕಾಯಿಗಳಿಂದ ಬಿಳಿ ಬಣ್ಣದ ಬೀಜಗಳನ್ನು ಬಿಡಿಸುವುದು ಎರಡು ಹಂತಗಳಲ್ಲಿ ನಡೆಯುತ್ತದೆ. ಮೊದಲು ಅಡಿಕೆ ಸಿಪ್ಪೆಯಂತಹ ಹೊರಕವಚವನ್ನು ಕುಟ್ಟಿ ಬಿಡಿಸಿ ಕಂದುಬಣ್ಣದ ಅಡಿಕೆಯಂತಹ ಬೀಜವನ್ನು ತೆಗೆಯಲಾಗುತ್ತದೆ. ಅಷ್ಟು ಪ್ರಮಾಣದ ಮೌಲ್ಯವರ್ಧನೆ ತೋಪಿನಲ್ಲಿರುವ ಶೆಡ್ ಗಳಂತಹ ಫ್ಯಾಕ್ಟರಿಗಳಲ್ಲಿಯೇ ನಡೆದು, ಮುಂದಿನ ಹಂತದ ಸಂಸ್ಕರಣೆಗಾಗಿ ಲಾರಿಗಳಲ್ಲಿ ಬೇರೊಂದು ಕಾರ್ಖಾನೆಗೆ ತೆರಳಿ, ಅಲ್ಲಿ ಬಿಳಿ ಬಣ್ಣದ, ತಿನ್ನಲು ಯೋಗ್ಯವಾದ ಬೀಜಗಳಾಗಿ ಮಾರುಕಟ್ಟೆಗೆ ಬರುತ್ತವೆ ಎಂಬ ಮಾಹಿತಿ ಕಲೆಹಾಕಿದೆ.

ಗ್ಯಾಂಗ್ ಯಂತ್ರದಿಂದ ಒಂದೇ ಸಮನೆ ಹೊರಬರುತ್ತಿದ್ದ ಹಸಿ ಅಡಿಕೆ ಬೀಜವನ್ನೇ ಹೋಲುವ ಕಂದುಬಣ್ಣದ ಮೆಕಡೆಮಿಯಾ ಬೀಜಗಳು ಸುತ್ತುತ್ತಿರುವ ಡ್ರಮ್ ಒಂದರ ಮೂಲಕ ಹಾದು ಕನ್ವೇಯರ್ ಬೆಲ್ಟಿನ ಮೂಲಕ ಹೊರಬರುತ್ತಿದ್ದವು. ಸುತ್ತುತ್ತಿರುವ ಡ್ರಮ್ ನಲ್ಲಿ ಭಾರವಾದ ಬೀಜಗಳು ಕೆಳಗುಳಿದು, ಹಗುರವಾದ ಸಿಪ್ಪೆಗಳು ಕಿಟಕಿಯಂತಹ ದ್ವಾರವೊಂದರ ಮೂಲಕ , ನೇರವಾಗಿ ಟ್ರಕ್ ಒಂದಕ್ಕೇ ಹೊರಬೀಳುತ್ತಿದ್ದವು. ಅಲ್ಲಿಂದ ನಾವು ಮೊದಲು ನೋಡಿದ ಸಿಪ್ಪೆಯ ರಾಶಿಗೆ ರವಾನೆಯಾಗುತ್ತವೆ ಎಂಬುದು ಗೋಚರಿಸಿತು.

ಕನ್ವೇಯರ್ ಬೆಲ್ಟಿನ ಪಕ್ಕದಲ್ಲಿ ತಿಳಿನೀಲಿ ಬಣ್ಣದ ಯೂನಿಫಾರ್ಮ್ ಧರಿಸಿದ ಹೆಂಗಳೆಯರಿಬ್ಬರು ಸ್ಟೂಲ್ ಮೇಲೆ ಕುಳಿತು ಹೊರಬರುತ್ತಿರುವ ಬೀಜಗಳನ್ನು ಗಮನಿಸುತ್ತಿದ್ದರು. ಪೂರ್ತಿ ಒಡೆಯದೇ ಉಳಿದಿರಬಹುದಾದ ಕಾಯಿಗಳನ್ನು ಅಥವಾ ಭಿನ್ನವಾದ ಬೀಜಗಳನ್ನು ಹೆಕ್ಕಿ ತೆಗೆಯುತ್ತಿದ್ದರು. ಕನ್ವೇಯರ್ ಬೆಲ್ಟಿನ ಮೂಲಕ ಹೊರಬಂದ ಬೀಜಗಳು ಒಂದೆರಡು ಬಾರಿ ತೊಳೆಯಲ್ಪಟ್ಟು ಮತ್ತೊಮ್ಮೆ ಏರುಮುಖವಾಗಿ ಸಾಗಿ ಗೋಡೆಯ ಹೊರಗಣ ಸಂಗ್ರಾಹಕವೊಂದಕ್ಕೆ ರಪ ರಪನೆ ಬಂದು ಬೀಳುತ್ತಿದ್ದವು. ಅಲ್ಲಿಂದ ಚೀಲಗಳಿಗೆ ತುಂಬಿ ನಾವು ಮೊದಲು ನೋಡಿದ ಲಾರಿಗಳ ಮೂಲಕ ಹೊರಕಳಿಸುತ್ತಿದ್ದರು.

## ಅಡಿಕೆ ಸುಲಿಯಂತ್ರಗಳ ಹೋಲಿಕೆ

ಮೇಲ್ನೋಟಕ್ಕೆ ಅಡಿಕೆ ಕಾಯಿಗಳಿಗೆ ಹೋಲಿಕೆಯಿದ್ದರೂ ಸಹ ಮೆಕಡೆಮಿಯಾ ಕಾಯಿಯ ಬೀಜಗಳು ಗಟ್ಟಿಯಾಗಿದ್ದು ಸಿಪ್ಪೆಯನ್ನು ಒತ್ತಿ ಒಡೆದು ಬೀಜಗಳನ್ನು ಬೇರ್ಪಡಿಸುವುದು ಸಾಧ್ಯ. ಸ್ವಲ್ಪ ಒಣಗಿದ ಕಾಯಿಗಳಾದರೆ ಸಿಪ್ಪೆಯು ತಾನಾಗಿಯೇ ಒಡೆಯುವ ಗುಣವನ್ನೂ ಸಹ ಹೊಂದಿದೆ. ನಮ್ಮ ಅಡಿಕೆ ಕಾಯಿಯ ಸಿಪ್ಪೆಗಳು ನಾರಿನಿಂದ ಕೂಡಿದ್ದು, ಮೆಕಡೆಮಿಯಾ ಕಾಯಿಗಳಂತೆ ಒತ್ತಿ ಒಡೆದು ಬೇರ್ಪಡಿಸಲು ಸೂಕ್ತವಾಗಿರುವುದಿಲ್ಲ.

ಆದರೆ ಮೆಕಡೆಮಿಯಾ ಪ್ರೊಸೆಸ್ಸಿಂಗ್ ವಿಧಾನವನ್ನು ಪೂರ್ತಿ ಗಮನಿಸಿದಾಗ ಸಿಪ್ಪೆ ಒಡೆಯುವ ಗ್ಯಾಂಗ್ ಮೆಶಿನ್ ಹೊರತು ಪಡಿಸಿ ಬಾಕಿ ಎಲ್ಲಾ ಹಂತಗಳೂ ಅಡಿಕೆ ಸುಲಿಯುವ ಪ್ರಕ್ರಿಯೆಗೆ ಪೂರಕವಾಗಿಯೇ ಇವೆ. ನಮ್ಮಲ್ಲಿ ಈಗ ಲಭ್ಯವಿರುವ 6 ಬೆಲ್ಟ್ ನ ಸುಲಿಯಂತ್ರವನ್ನು ಇನ್ನಷ್ಟು ಉತ್ತಮಪಡಿಸಿ ಒಮ್ಮೆಗೇ ಇನ್ನೂ ಹೆಚ್ಚು ಕಾಯಿಗಳನ್ನು ಸುಲಿಯುವ ಗ್ಯ್ಂಗ್ ಮೆಶಿನ್ ಹಾಗೆ ಮಾಡಿ ಕನ್ವೆಯರ್ ಬೆಲ್ಟ್ ಗಳೊಂದಿಗೆ ಜೋಡಿಸಿದರೆ ನಮ್ಮಲ್ಲೂ ಸಣ್ಣದೊಂದು ಅಡಿಕೆ ಪ್ರೊಸೆಸ್ಸಿಂಗ್ ಫ್ಯಾಕ್ಟರಿಗೆ ನಾಂದಿ ಹಾಡಬಹುದೇನೋ.

ಅಂದ ಹಾಗೆ, ಈಗ ಲಭ್ಯವಿರುವ ಮೆಕ್ಯಾನಿಕಲ್ ಮೆಶಿನ್ ಗಳ ಬದಲು ಕಂಪ್ಯೂಟರ್ ಆಧಾರಿತ ಕಂಟ್ರೋಲ್ ಗಳಿರುವ ಗ್ಯಾಂಗ್ ಮೆಶಿನ್ ಮಾಡಿಸಲು ಆಲೋಚಿಸಿ ಹಲವು ತಜ್ಞರನ್ನು ನಾನು ಸಂಪರ್ಕಿಸಿದ್ದುಂಟು. ನನ್ನ ಒತ್ತಡಗಳ ನಡುವೆ ಅವರ ಬೆನ್ನ ಹಿಂದೆ ಬಿದ್ದು ಅದಕ್ಕೊಂದು ಸುಖಾಂತ ಕಾಣಿಸಬೇಕೆಂಬ ನನ್ನ ಬಯಕೆ ಈಡೇರಿಲ್ಲ. ಆಸಕ್ತರು ಕೈ ಜೋಡಿಸುವ ಮನಸ್ಸಿದ್ದರೆ ಸೀಸನ್ ಮುಗಿಯುವ ಮೊದಲೇ ಚರ್ಚಿಸಿ ಯೋಜನೆಯೊಂದನ್ನು ರೂಪಿಸಬಹುದೇನೋ!